ಸುಂದರಿ. ರಾಧಾಳನ್ನು ತಾನು ಹಾಗೆ ನೋಡುವುದು ಅವಳಿಗೆ ಕೊಂಚ ಕೂಡ ಇಷ್ಟವಾಗುವುದಿಲ್ಲವೆಂದು ಆ ಮೇಲೆ ತಿಳಿಯಿತು. ಅದಕ್ಕಾಗಿಯೇ ಅವಳು ತನ್ನೊಂದಿಗೆ ಜಗಳ ತೆಗೆದಿದ್ದಳು.

'ಏಯ್ ಮೂಗಾ, ಹೋಗೋ ನೀನು ರಾಧಾಳನ್ನೇ ಮದುವೆ ಮಾಡಿಕೊಂಡು ಹಾಳಾಗು' ಎಂದು ಕೋಪದಿಂದ ತಲೆಗೂದಲನ್ನು ಬಿಚ್ಚಿ ಒಳ ಹೋಗಿದ್ದಳು. ಮತ್ತೊಮ್ಮೆ ಅವಳು ತನಗೆ ಊಟ ಬಡಿಸುವಾಗ ಎಲ್ಲವನ್ನು ಹೇಳಿದ್ದಳು. ರಾಧಾಳನ್ನು ಹತ್ತಿರದಿಂದ ನೋಡಿದರೆ ಏನೇನೂ ಚೆನ್ನಾಗಿಲ್ಲವಂತೆ. ಅವಳು ಏನೇನೋ ಪುಡಿ ಬಳಿದು ಓಟ್ಟನ್ ತುಳ್ಳಲ್(ಕೇರಳದ ಜಾನಪದ ನೃತ್ಯ)ನವರಂತೆ ಚೆನ್ನಾಗಿ ಕಾಣಿಸುತ್ತಿದ್ದಳಂತೆ. ರಾಧ ಮಾತನಾಡುವಾಗ ಕೆಟ್ಟ ವಾಸನೆ ಬಡಿಯುತ್ತದೆಯಂತೆ. ಅವಳು ತುಂಬಾ ಕೆಟ್ಟವಳಂತೆ. ಹಾಗೆಲ್ಲಾ ಅವಳು ರಾಧಾಳ ಬಗ್ಗೆ ಮಾತನಾಡಿದ ನಂತರ ತಾನು ರಾಧಾಳತ್ತ ನೋಡುತ್ತಿರಲಿಲ್ಲ.

'ಚಹದ ಪುಡಿ ಎಲ್ಲೋ, ಮೂಗ?'

ಅವಳು ಮನೆಯೊಳಗಿನಿಂದ ಹೊರಬಂದು ತನ್ನ ಕೈಯಲ್ಲಿದ್ದ ಡಬ್ಬವನ್ನು ಕಸಿದುಕೊಂಡು ಒಳಗೆ ಹೋದಳು. ಅವಳು ಇಷ್ಟೊಂದು ಆತಂಕದಿಂದ ಓಡುತ್ತಿರುವುದನ್ನು ನೋಡುತ್ತಿರುವುದು ಇದೇ ಮೊದಲು. ಚಹ ಮಾಡ್ಲಿಕ್ಕೊ ಏಕೆ ಇಷ್ಟೊಂದು ತರಾತುರಿ? ಸ್ವಲ್ಪ ತಡವಾದರೆ ತಾನೇನಾದರೂ ಬೈಯುತ್ತೇನೆಯೇ. ಸಂಜೆ ಆಗಿದೆ. ಇನ್ನು ಚಹ ಸೇವಿಸಿದರೆ ಊಟಕ್ಕೆ ರುಚಿಸಿಗದು. ತನಗೆ ಮೊದಲು ಊಟಕ್ಕೆ ಬಡಿಸುತ್ತಾಳೆ. ಊಟದ ನಡುವೆ ಮಜ್ಜಿಗೆ ಹಾಕುತ್ತಾಳೆ. ಕೆಲವೊಮ್ಮೆ ಅದನ್ನೂ ಗುಟ್ಟಾಗಿ ತಂದುಕೊಡುತ್ತಾಳೆ. ಒಂದಲ್ಲ ಒಂದು ದಿನ ದೊಡ್ಡಮ್ಮ ಮತ್ತು ಶಂಕುಣ್ಣಿ ನಾಯರ್ ಸತ್ತುಹೋಗುತ್ತಾರೆ. ವಯಸ್ಸಾದವರಲ್ಲವೆ? ಅವರ ನಂತರ ತಾನು ಅವಳನ್ನು ಮದುವೆಯಾಗಿ ಸುಖವಾಗಿರುತ್ತೇನೆ. ಆಗ ತನಗೆ ಇಷ್ಟ ಬಂದಷ್ಟು ಊಟ ಮಾಡಬಹುದು. ಕಣ್ಣು ತುಂಬಾ ನಿದ್ರೆಯನ್ನೂ ಮಾಡಬಹುದು. ಬಣ್ಣ ಬಣ್ಣದ ಅಂಗಿಗಳನ್ನು ತೊಟ್ಟು ಬೀಡಿ ಸೇದಬಹುದು.

ಅಂಗಳದಿಂದ ಗಟ್ಟಿ ನಗು ಕೇಳಿದಾಗ ಮೂಗ ದಿಗ್ಭ್ರಾಂತನಾದ. ತನ್ನನ್ನು ಹಾಸ್ಯ ಮಾಡುತ್ತಿಲ್ಲವಷ್ಟೆ. ಸ್ವಲ್ಪ ಸಮಯದ ತರುವಾಯ ನಗು ನಿಂತಿತು. ದೊಡ್ಡ ಧ್ವನಿಯಲ್ಲಿ ಮಾತನಾಡುವುದು ಕೇಳಿಸಿತು. ಆಗ ಮೂಗನಿಗೆ ಅಂದಿನ ಅತಿಥಿಯ ನೆನಪಾಯಿತು. ಮೂಗ ಸದ್ದಾಗದಂತೆ ನಡೆದು ಅಂಗಳದತ್ತ ಇಣುಕಿದ. ಹಗ್ಗದ ಮಂಚದ ಮೇಲೆ ಚಾಪೆ ಹಾಸಲಾಗಿತ್ತು. ಅದರ ಮೇಲೆ ಅತಿಥಿ ಆಸೀನನಾಗಿದ್ದ. ನೆಲದ ಮೇಲೆ ಹಾಕಿದ್ದ ಚಾಪೆಯಲ್ಲಿ ಜ್ಯೋತಿಷಿ ಪಣಿಕ್ಕರ್ ಮತ್ತು ಶಂಕುಣ್ಣಿ ನಾಯರ್ ಕುಳಿತಿದ್ದರು. ನಿಜ, ಅದೊಂದು ಅತಿಥಿ ಸತ್ಕಾರದ ಸನ್ನಾಹ. ಯಾರಿರಬಹುದು? ಅವಳನ್ನೇ ಕೇಳಿದರೆ ಹೇಗೆ? ಆದರೆ, ಅವಳು ಅಡಿಗೆ ಕೆಲಸದಲ್ಲಿ ಮಗ್ನಳಾಗಿದ್ದಾಳೆ. ಈಗ ತಾನು ಕೇಳಿದರೆ ಅವಳಿಗೆ ಇಷ್ಟವಾಗಲಾರದು.

ಧ್ವನಿಯೇರಿದ ಮಾತುಕತೆಗಳು ಮತ್ತೆ ಕೇಳಿಸತೊಡಗಿದವು.

'ನನಗೆ ಇರೋದು ಒಂದು ವಾರದ ರಜೆ. ದಿನ ಚೆನ್ನಾಗಿಲ್ಲವೆಂದಾದರೆ...'

'ಜಾನುವಿಗೆ ಅಗತ್ಯವಾದ ಒಡವೆಗಳನ್ನು ಮಾಡಿಸಬೇಕೆಂದರೆ...'

'ಅದೇನೂ ಬೇಡ. ನಾನು ವರದಕ್ಷಿಣೆ, ಒಡವೆ, ಆಸ್ತಿಗಳಿಗೆಲ್ಲಾ ಆಶಿಸಿಯೇನೂ ಅಲ್ಲ ಇಲ್ಲಿಗೆ ಬಂದಿದ್ದು. ನನಗೆ ಒಳ್ಳೆಯ ತರವಾಡಿನವರಾಗ(ಮನೆತನದವರು) ಬೇಕು, ಅಷ್ಟೆ.'

'ಹೌದೌದು. ಅರ್ಥವಾಯಿತು ಬಿಡಿ. ಆದರೂ ಹೀಗೆ ಸಡನ್ನಾಗಿ...' ಎಲ್ಲರೂ ಏನೇನೋ ಮಾತನಾಡಿಕೊಳ್ಳುತ್ತಿದ್ದರು. ಆ ನಡುವೆ ಅವಳು ಒಂದು ಗಿಂಡಿ, ಎರಡು ಕಂಚಿನ ಲೋಟಗಳೊಂದಿಗೆ ಅಲ್ಲಿಗೆ ಬಂದಳು. ಅದನ್ನು ಚಾಪೆಯ ಮೇಲಿಟ್ಟು ಮರಳಿದಳು. ಮೂಗನಿಗೆ ಅವಳ ಆಗಮನ